ಅ) ವಿರಾಜಪೇಟೆ ಟೌನ್ ಪಂಚಾಯತಿಗೆ ಸಂಬಂಧಿಸಿದಂತೆ ನಡೆದ ಹಲವಾರು ಅವ್ಯವಹಾರಗಳನ್ನು ಲೋಕಾಯುಕ್ತರ ಮೂಲಕ ತನಿಖೆ ನಡೆಸಬೇಕೆಂದು ಕೌನ್ಸಿಲರ್‌ಗಳು ನಡವಳಿಕೆ (ಟೌನ್ ಪಂಚಾಯತಿ ಸಭೆಯಲ್ಲಿ) ಮಾಡಿದ್ದು, ಈವರೆವಿಗೆ ಲೋಕಾಯುಕ್ತಕ್ಕೆ ಈ ಅವ್ಯವಹಾರಗಳನ್ನು ತನಿಖೆ ಮಾಡಬೇಕೆಂಬ ಶಿಫಾರಸ್ಸು ಕಳಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ ಸರ್ಕಾರ ಈ ಬಗ್ಗೆ ಎನು ಕ್ರಮ ಕೈಗೊಂಡಿದೆ; ಹಾಗೂ ತನಿಖೆಗೆ ಒಳಪಡಿಸಿರುವ ಅವ್ಯವಹಾರಗಳು ಯಾವುವು?

ಶ್ರೀ ಎಸ್.ಆರ್. ಮೋರೆ (ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಹೌದು.

ಆ) ಈ ಬಗ್ಗೆ ಪ್ರಸ್ತಾವನೆ ಇನ್ನು ಸರ್ಕಾರಕ್ಕೆ ತಲುಪಿರುವುದಿಲ್ಲ. ವರದಿ ಬಂದ ಕೂಡಲೇ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

662(871) : ಶ್ರೀ ದೊಡ್ಡನಗೌಡ ಹನುಮಗೌಡ ಪಾಟೀಲ್ (ಕುಷ್ಟಗಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣಾ ನದಿಯಿಂದ ಕೊಪ್ಪಳ ಜಿಲ್ಲೆಯ ಕುಷ್ಟಗಿ ಪಟ್ಟಣಕ್ಕೆ ಕುಡಿಯುವ ನೀರು ಪೂರೈಕೆ ಯೋಜನೆಯನ್ನು ಯಾವ ವರ್ಷ ಹಮ್ಮಿಕೊಂಡು ಯಾವ ವರ್ಷ ಮುಗಿಸಲಾಗಿದೆ, ಹಾಗೂ ಖರ್ಚು ಮಾಡಿರುವ ಒಟ್ಟು ಹಣವೆಷ್ಟು;

ಆ) ಇಂದಿಗೂ ಸರಿಯಾಗಿ ಅಲ್ಲಿ ನೀರಿನ ಪೂರೈಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಕೈಗೊಂಡ ಕ್ರಮಗಳೇನು;

ಈ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ 50–50 ಅನುದಾನದ ಮೇರೆಗೆ ರಾಜ್ಯದ ಯಾವ ಯಾವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಕುಡಿಯುವ ನೀರಿನ ಶಾಶ್ವತ ಯೋಜನೆ ಅಡಿಯಲ್ಲಿ 1989–90ನೇ ಆರ್ಥಿಕ ಸಾಲಿನಿಂದ ಇಂದಿನವರೆವಿಗೂ ಮಂಜೂರಾತಿ ಪಡೆಯಲಾಗಿದೆ;

ಉ) ರಾಯಚೂರು ಜಿಲ್ಲೆಯ ಮುದಗಲ್ಲ ಪಟ್ಟಣದ ಶಾಶ್ವತ ಕುಡಿಯುವ ನೀರಿನ ಪೂರೈಕೆ ಯೋಜನೆ (ನಾರಾಯಣಪುರ ಅಣೆಕಟ್ಟಿನ ಬಸವಸಾಗರ ಜಲಾಶಯದಿಂದ) ಇಂದಿಗೂ ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸಿರುವುದು ನಿಜವೇ;

ಊ) ಈ ಅನಗತ್ಯ ವಿಳಂಬಕ್ಕೆ ಕಾರಣಗಳೇನು;

ಋ) ಕೇಂದ್ರ ಸರ್ಕಾರದ ಒಪ್ಪಿಗೆ ದೊರೆಯಲು ವಿಳಂಬವಾಗಿದ್ದರಿಂದ ರಾಜ್ಯ ಸರ್ಕಾರದ ಅನುದಾನದಿಂದ 2004–05ನೇ ಆರ್ಥಿಕ ಸಾಲಿನಿಂದಲೇ ಈ ಯೋಜನೆ ಜಾರಿಗೆ ತರಲಾಗುವುದೆಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು

ಮಾರ್ಚ್ ತಿಂಗಳಲ್ಲಿ ರಾಯಚೂರಿಗೆ ಭೇಟಿ ನೀಡಿದಾಗ ಖಚಿತ ಭರವಸೆ ನೀಡಿದ್ದರೂ ಕಾರ್ಯಾಚರಣೆಗೆ ಬರದಿರುವುದಕ್ಕೆ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಕೃಷ್ಣ ನದಿಯಿಂದ ಕೊಪ್ಪಳ ಜಿಲ್ಲೆಯ ಕುಷ್ಟಗಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಗೆ 1997ರಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿದೆ. 1999ರಲ್ಲಿ ಯೋಜನೆಯ ವಿವಿಧ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಯಿತು. ಸದರಿ ಯೋಜನೆಯನ್ನು ಡಿಸೆಂಬರ್ 2001ರಲ್ಲಿ ಮುಗಿಸಿ ಕಾರ್ಯಾರಂಭ ಮಾಡಲಾಗಿದೆ. ಈ ಯೋಜನೆಗಾಗಿ ಇಲ್ಲಿಯವರೆಗೆ ರೂ. 7863.75 ಲಕ್ಷಗಳು ಖರ್ಚಾಗಿದೆ.

ಆ) ಬಂದಿದೆ.

ಇ) ಧನ್ನೂರ ಮೂಲ ಸ್ಥಾವರದಿಂದ ಇಳಕಲ್‌ರವರೆಗೆ ಅಳವಡಿಸಲಾಗಿರುವ ಕೊಳವೆ ಮಾರ್ಗದ ಸೋರುವಿಕೆಯ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಈ ಸೋರುವಿಕೆಯನ್ನು ತಡೆಯಲು ಕೊಳವೆ ಮಾರ್ಗದಲ್ಲಿ ಸರ್ಜ ನಿವಾರಣಾ ಉಪಕರಣಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ನೀರು ಸರಬರಾಜು ವ್ಯವಸ್ಥೆಯ ಸಮರ್ಪಕ ನಿರ್ವಹಣೆಗಾಗಿ ಅವಶ್ಯವಿರುವ ಹಣವನ್ನು ಹುನಗುಂದ, ಇಳಕಲ್ ಹಾಗೂ ಕುಷ್ಟಗಿ ಪುರಸಭೆಗಳಿಂದ ಭರಿಸಲು ಸೂಚಿಸಲಾಗಿದೆ.

ಈ) 1989–90ನೇ ಆರ್ಥಿಕ ಸಾಲಿನಿಂದ ಇಂದಿನವರೆಗೆ 35 ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ 50:50 ಅನುದಾನದ ಮೇರೆಗೆ ಮಂಜೂರಾತಿಯನ್ನು ಪಡೆಯಲಾಗಿದೆ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಉ) ಮುದಗಲ್ ಪಟ್ಟಣದ ಶಾಶ್ವತ ಕುಡಿಯುವ ನೀರಿನ ಯೋಜನೆಗೆ ತ್ವರಿತ ನೀರು ಸರಬರಾಜು ಯೋಜನೆಯಡಿಯಲ್ಲಿ ಈಗಾಗಲೇ ಕೇಂದ್ರ ಸರ್ಕಾರದ ಅನುಮತಿ ದೊರೆತಿದ್ದು, ರಾಜ್ಯ ಸರ್ಕಾರದಿಂದ ರೂ. 802.00 ಲಕ್ಷಗಳಿಗೆ ಆಡಳಿತಾಥ್ಮಕ ಅನುಮೋದನೆ ನೀಡಲಾಗಿದೆ, ಸದರಿ ಯೋಜನೆಯ ಕಾಮಗಾರಿಯನ್ನು ನೇಮಿಸಲಾಗಿದೆ.

ಊ) ಯೋಜನೆಯಲ್ಲಿ ಅನಗತ್ಯ ವಿಳಂಬವಾಗಿರುವುದಿಲ್ಲ.

ಋ) ಈ ಯೋಜನೆಯನ್ನು ನಿರ್ವಹಿಸಲು ಗುತ್ತಿಗೆದಾರರನ್ನು ಈಗಾಗಲೇ ನೇಮಿಸಲಾಗಿದ್ದು ಕಾಮಗಾರಿಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು.

ಅನುಬಂಧ–1

ಕ್ರ.ಸಂ.	ಭಾರತ ಸರ್ಕಾರದಿಂದ ತಾಂತ್ರಿಕ ಮಂಜೂರಾತಿ ದೊರೆತ ವರ್ಷ	ನೀರು ಸರಬರಾಜು ಯೋಜನೆಯ ಹೆಸರು	ತಾಂತ್ರಿಕ ಮಂಜೂರಾತಿ ಪಡೆದ ಯೋಜನೆಯ ಸಂಖ್ಯೆ
1.	1991–92	ಸದಲಗಾ	1
2.	1992–93	– –	–
3.	1993–94	– –	–
4.	1994–95	– –	–
5.	1995–96	ಕೆರೂರ	1
6.	1996–97	ಬೇಲೂರು, ಸಾಲಿಗ್ರಾಮ, ಕೊಟ್ಟೂರು ಮುಂಡರಗಿ, ನವಲಗುಂದ	5
7.	1997–98	ಶ್ರೀನಿವಾಸಪುರ, ಅರಕಲಗೂಡು	2
8.	1998–99	ಚಿಟಗುಪ್ಪ, ಬದಾಮಿ, ಪಿರಿಯಾಪಟ್ಟಣ ಕಲಘಟಗಿ, ನಾಗಮಂಗಲ, ಬೀಳಗಿ ಮತ್ತು ಶೃಂಗೇರಿ	7
9.	1999–2000	ಆಲೂರು, ತುರುವೇಕೆರೆ	2
10.	2000–01	ದೇವದುರ್ಗ, ಕೊಪ್ಪ, ವಿರಾಜಪೇಟೆ ಬಾಗೇಪಲ್ಲಿ, ಮೊಳಕಾಲ್ಮೂರು ಮತ್ತು ಹೆಚ್.ಡಿ. ಕೋಟೆ	6
11.	2001–02	ಗುರ್‌ಮಿಟ್ಕಲ್, ಹೊಸದುರ್ಗ, ಕೆ.ಆರ್. ಪೇಟೆ, ಗುಬ್ಬಿ, ರಾಯಭಾಗ	5
12.	2002–03	ಪಾವಗಡ, ಗುಡಿಬಂಡೆ, ಮುದಗಲ್ ಯಲ್ಲಾಪುರ	4
13.	2003–04	ಜಗಳೂರು, ಹೊಳಲ್ಕೆರೆ	2
	ಒಟ್ಟು ತಾಂತ್ರಿಕ ಮಂಜೂರಾತಿ ಪಡೆದ ಯೋಜನೆಗಳ ಸಂಖ್ಯೆ		35 ಯೋಜನೆಗಳು

663(872) : ಶ್ರೀ ದೊಡ್ಡನಗೌಡ ಹನುಮಗೌಡ ಪಾಟೀಲ್ (ಕುಷ್ಟಗಿ) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಗರ ಪುರಸಭೆಗಳ ಮತ್ತು ಪಟ್ಟಣಪಂಚಾಯತಿಗಳ ಒಳಚರಂಡಿ ಮತ್ತು ರಸ್ತೆಗಳ ಅಗಲೀಕರಣ ನವೀಕರಣ ಇತ್ಯಾದಿ ಕಾಮಗಾರಿಗಳಿಗಾಗಿ 2001–02ನೇ ಆರ್ಥಿಕ ಸಾಲಿನಿಂದ ಸಾಲದ ರೂಪದಲ್ಲಿ ಅನುದಾನ ನೀಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ನಗರ ಸ್ಥಳೀಯ ಸಂಸ್ಥೆ ಈ ಅನುದಾನ ಬಳಕೆ ಮಾಡಿಕೊಂಡಿದೆ;